**DECEMBER 8,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಬೆಳಗಾವಿಯ ಸುವರ್ಣಸೌಧದಲ್ಲಿ,** ನಾಳೆ ಸೋಮವಾರದಿಂದ, 10 ದಿನಗಳ ವರೆಗೆ, ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯಲಿದೆ. ಅಧಿವೇಶನದ ಮೊದಲ ದಿನವಾದ ನಾಳೆ, ವಿಶ್ವಗುರು ಶ್ರೀ ಬಸವಣ್ಣನವರು ಸ್ಥಾಪಿಸಿದ, ವಿಶ್ವದ ಮೊದಲ ಸಂಸತ್ತು ಎಂಬ ಖ್ಯಾತಿಯ ಅನುಭವ ಮಂಟಪದ, ಬೃಹತ್ ತೈಲವರ್ಣ ಚಿತ್ರವನ್ನು, ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ಅವರ ಅಧ್ಯಕ್ಷತೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನಾವರಣಗೊಳಿಸಲಿದ್ದಾರೆ. 20 ಅಡಿ ಉದ್ದ ಹಾಗೂ 10 ಅಡಿ ಅಗಲದ ಬೃಹತ್ ಕ್ಯಾನ್ವಾಸ್ ನಲ್ಲಿ ತೈಲ ವರ್ಣದ ಮೂಲಕ ಮೂಡಿರುವ ವಿಶೇಷ ಚಿತ್ರ, ಪ್ರಜಾಪ್ರಭುತ್ವದ ಮೂಲ ಆಶಯಗಳು, ಸಮಾನತೆ, ಮಾನವೀಯ ಸಂದೇಶಗಳನ್ನು ಜಗತ್ತಿಗೆ ಪರಿಚಯಿಸಲಿದೆ. ಬೆಂಗಳೂರು ಚಿತ್ರಕಲಾ ಪರಿಷತ್ತಿನ ಖ್ಯಾತ ಕಲಾವಿದರಾದ ಸತೀಶ್ ರಾವ್ ಶಿವಮೊಗ್ಗ, ಶ್ರೀಕಾಂತ್ ಹೆಗಡೆ ಸಿದ್ದಾಪುರ, ಶೇಷಾದ್ರಿಪುರಂ ಕೆನ್ ಸ್ಕೂಲ್ ಕಲಾ ಶಾಲೆಯ ಅಶೋಕ್ ಯು, ಜಗಳೂರು ರಾಜಾ ರವಿವರ್ಮ ಕಲಾ ಶಾಲೆಯ ರೂಪಾ ಎಂ.ಆರ್, ವೀರಣ್ಣ ಮಡಿವಾಳಪ್ಪ ಬಬ್ಲಿ ಹಾಗೂ ಜಮಖಂಡಿ ದಫಲಾಪುರದ ಮಹೇಶ ನಿಂಗಪ್ಪ, ತೈಲ ವರ್ಣ ಚಿತ್ರ ರಚನೆ ಮಾಡಿದ್ದಾರೆ. ನಾಳೆ ಬೆಳಗ್ಗೆ 10.30 ಕ್ಕೆ ಆರಂಭಗೊಳ್ಳುವ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಹಿತ ವಿವಿಧ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ.

<><><>

**ವಿಜಯನಗರ ಜಿಲ್ಲೆ,** ಹೊಸಪೇಟೆಯ ತುಂಗಭದ್ರಾ ಅಣೆಕಟ್ಟೆಗೆ ಯಾವ ವಿನ್ಯಾಸದ ಕ್ರಸ್ಟ್ ಗೇಟ್ ಅಳವಡಿಸಲು ಸಾಧ್ಯವಿದೆ ಎಂದು, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಚರ್ಚೆ ನಡೆಸಿದರು. ಪ್ರಾಧಿಕಾರದ ಅಧ್ಯಕ್ಷ ಅನಿಲ್ ಜೈನ್ ಹಾಗೂ ಗೇಟ್ ವಿಭಾಗದ ನಿರ್ದೇಶಕ ರಾಹುಲ್ ಕುಮಾರ್ ಸಿಂಗ್ ಅವರು ಹೊಸಪೇಟೆಗೆ ಆಗಮಿಸಿ, ತುಂಗಭದ್ರಾ ಮಂಡಳಿ ಹಾಗೂ ನೀರಾವರಿ ಇಲಾಖೆಗಳ ಅಧಿಕಾರಿಗಳು, ಎಂಜಿನಿಯರ್ ಗಳ ಜೊತೆ ಚರ್ಚಿಸಿದರು.

<><><>

**ಕೃಷಿಯನ್ನು ಲಾಭದಾಯಕ** ವಲಯವನ್ನಾಗಿಸುವುದು, ಸರ್ಕಾರದ ಮುಖ್ಯ ಆದ್ಯತೆಯಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ರಾಮನಗರ ಜಿಲ್ಲೆ, ಕನಕಪುರದಲ್ಲಿ ನೂತನವಾಗಿ ಆರಂಭಗೊಂಡ, ಎಸ್.ಕರಿಯಪ್ಪ ಕೃಷಿ ಮಹಾವಿದ್ಯಾಲಯವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಅತ್ಯಾಧುನಿಕ ಕೃಷಿ ಪದ್ಧತಿಗೆ ಪ್ರಾಶಸ್ತ್ಯ ನೀಡುವ ಜೊತೆಗೆ, ಕೃಷಿ ಅಧ್ಯಯನಕ್ಕೂ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

<><><>

**ಕೇಂದ್ರ ಸರ್ಕಾರ ಆಶಾ ಹಾಗೂ ಅಂಗನವಾಡಿ** ಕಾರ್ಯಕರ್ತೆಯರನ್ನು, ಅರೆಕಾಲಿಕ ಜನಗಣತಿ ನೊಂದಣಿಗಾರರನ್ನಾಗಿ ನೇಮಕ ಮಾಡಿದೆ ಎಂದು, ದಾವಣಗೆರೆ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ತಿಳಿಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾವೇರಿ ಹಾಗೂ ಬಳ್ಳಾರಿ ಜಿಲ್ಲೆಯ ಜನಗಣತಿದಾರರಿಗೆ ಆಯೋಜಿಸಲಾಗಿದ್ದ, ಆಪ್ ತಂತ್ರಾಂಶದ ಮಾದರಿ ನೊಂದಣಿ ಸಮೀಕ್ಷಾ ತರಬೇತಿಗೆ ಚಾಲನೆ ನೀಡಿ, ಅವರು ಮಾತನಾಡಿದರು. ಕೇಂದ್ರ ಜನಗಣತಿ ಇಲಾಖೆ, ದೈನಂದಿನ ಜನನ ಮತ್ತು ಮರಣ ಪ್ರಮಾಣವನ್ನು ಈ ನೊಂದಣಿ ಪದ್ಧತಿಯ ಮೂಲಕ ನಿಖರ ಮಾಹಿತಿ ಸಂಗ್ರಹಿಸುತ್ತಿದೆ ಎಂದರು.

<><><>

**ಕ್ಷಯ ರೋಗ ಮುಕ್ತ** ರಾಜ್ಯವಾಗಿಸಲು, ಪ್ರತಿಯೊಬ್ಬರೂ ಪಣತೊಡಬೇಕು ಎಂದು, ದಕ್ಷಿಣಕನ್ನಡ ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಎಚ್.ಆರ್.ತಿಮ್ಮಯ್ಯ ಹೇಳಿದ್ದಾರೆ. ಮಂಗಳೂರಿನ ವೆನ್ಲಾಕ್ ಜಿಲ್ಲಾ ಆಸ್ಪತ್ರೆಯ, ಆರ್.ಪಿ.ಸಿ.ಸಿ. ಸಭಾಂಗಣದಲ್ಲಿ, 100 ದಿನಗಳ ಕ್ಷಯ ರೋಗ ನಿರ್ಮೂಲನಾ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. 2030ರ ವೇಳೆಗೆ ಕ್ಷಯವನ್ನು ಸಂಪೂರ್ಣ ಹತೋಟಿಗೆ ತರುವ ಗುರಿ ಇದೆ ಎಂದರು.

<><><>

**ಧಾರವಾಡದ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್** ಸ್ಮರಣಾರ್ಥ ಕೊಡಮಾಡುವ, ಬಾಲೇಖಾನ್ ಸಹ ಕಲಾವಿದ ಪ್ರಶಸ್ತಿಗೆ, ಮುಂಬಯಿಯ ಖ್ಯಾತ ತಬಲಾ ವಾದಕ ಪಂಡಿತ ಕಾಲೀನಾಥ ಮಿಶ್ರಾ ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗೆ, ಸಿತಾರ್ ರತ್ನ ಸಮಿತಿ ಅಧ್ಯಕ್ಷ ರಾಘವೇಂದ್ರ ಆಯಿ ಭಾಜನರಾಗಿದ್ದಾರೆ. ಧಾರವಾಡದ ಸೃಜನಾ ರಂಗಮಂದಿರದಲ್ಲಿ ನಡೆದ, ಘರಾಣೆಯ ಸ್ಥಾಪಕ ಸಿತಾರ ರತ್ನ, ಉಸ್ತಾದ್ ರಹಿಮತ್ ಖಾನ್ ಅವರ, 70ನೇ ಪುಣ್ಯ ತಿಥಿ ಸಂಗೀತೋತ್ಸವ ಸಮಾರಂಭದಲ್ಲಿ, ಪ್ರಾಚಾರ್ಯ ಶಶಿಧರ ತೋಡಕರ ಹಾಗೂ ಖಾನ್ ಕುಟುಂಬದ ಸಹೋದರರು, ಸಾಧಕರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಿದರು.

<><><>

**ಯುವ ಕವಿಗಳು** ಹೆಚ್ಚು ಹೆಚ್ಚು ಸಾಹಿತ್ಯ ಕೃತಿಗಳನ್ನು ಓದುವ ಹಾಗೂ ಸಹಕವಿಗಳು ಬರೆದ ಕವಿತೆಗಳನ್ನೂ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಆಗ ಮಾತ್ರ ಉತ್ತಮ ಕವಿಯಾಗಿ ಹೊರಹೊಮ್ಮಲು ಸಾಧ್ಯ ಎಂದು ಪತ್ರಕರ್ತ ಜೋಗಿ ಹೇಳಿದರು. ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ, ಡಾಕ್ಟರ್ ಡಿ.ಎಸ್ ಕರ್ಕಿ ಸಾಹಿತ್ಯ ವೇದಿಕೆ ಟ್ರಸ್ಟ್ ಅಡಿ, ಜಗದೀಶ ಶೆಟ್ಟರ ದತ್ತಿ ಆಶ್ರಯದಲ್ಲಿ ಆಯೋಜಿಸಿದ್ದ, ಕವಿ ಕರ್ಕಿ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಯುವ ಕವಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ, ಅವರು ಮಾತನಾಡಿದರು. 2019 ನೇ ಸಾಲಿಗೆ 'ಮಂಜಿನೊಳಗಣ ಕೆಂಡ' ಕೃತಿಗಾಗಿ ಹೆಬಸೂರ ರಮಜಾನ್, 2020 ನೇ ಸಾಲಿಗೆ 'ಸರಹದ್ದುಗಳಿಲ್ಲದ ಭೂಮಿಯ ಕನಸು' ಕೃತಿಗಾಗಿ ನಿರ್ಮಲಾ ಶೆಟ್ಟರ, 2021 ನೇ ಸಾಲಿಗೆ 'ಮನಮದ್ದಳೆಯ ಸ್ವಗತ' ಕೃತಿಗಾಗಿ ಶ್ವೇತಾ ನರಗುಂದ, ಹಾಗೂ 2022 ನೇ ಸಾಲಿಗೆ 'ಎಂಟು ಬಣ್ಣದ ಕೌದಿ' ಕೃತಿಗಾಗಿ ಡಾಕ್ಟರ ಶಿವನಂದ ಕುಬಸದ ಅವರಿಗೆ ಡಾಕ್ಟರ್ ಡಿ.ಎಸ್ ಕರ್ಕಿ ಕಾವ್ಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>